ಯಾಗಿ ನೀಡಲಾಗುತ್ತದೆ. ತೀಯ್ಯನಾದರೂ ರಾಮನ್‌ಕುಟ್ಟಿಯನ್ನು ರಾಮೋಟ್ಟಿ ಎಂದೇ ಕರೆಯುತ್ತಿದ್ದರು. ರಾಮೋಟ್ಟಿಗೆ ಊರಿನಲ್ಲಿ ಒಂದು ವಿಶೇಷ ಸ್ಥಾನಮಾನವಿದೆ.

ಅಮ್ಮ ಹೇಳಿದ ಮಾವನ ಸಾಹಸ ಕತೆಗಳಿಂದ ನಾನು ಅವರನ್ನು ಆದರ್ಶ ಪುರುಷನಾಗಿ ಸ್ವೀಕರಿಸಿದೆ. ಯಾವುದೋ ಒಂದು ಮದುವೆಗೆ ಹೋಗಿದ್ದಾಗ ಮಾವನನ್ನು ಮೊದಲು ಮತ್ತು ಕೊನೆಯದಾಗಿ ನಾನು ಕಂಡಿದ್ದೆ. ಅದು ನಡೆದಿದ್ದು ನಾಲ್ಕೈದು ವರ್ಷಗಳ ಹಿಂದೆ. ಅಪ್ಪ ಮಾವನನ್ನು ಕಂಡಕೂಡಲೇ ದೂರಕ್ಕೆ ಸರಿದು ನಿಂತರು. ಮಾವನನ್ನು ಭಯ ಭಕ್ತಿಯಿಂದ ನೋಡುತ್ತಿದ್ದ ಅಮ್ಮನಿಗೆ ಕರುಳು ಸುಡುವ ಒಂದು ನೋಟ ಲಭಿಸಿತು. ಅಮ್ಮ ಜನರ ಗುಂಪಿನಲ್ಲಿ ಬಚ್ಚಿಟ್ಟುಕೊಂಡರು.

ಯಾರೂ ಜೊತೆ ಸಿಗದಿದ್ದಾಗ ಕಲ್ಯಾಣ ಮಂಟಪದ ಜನಸಂದಣಿಯಿಂದ ದೂರವಾದೆ. ಬಾವಿಕಟ್ಟೆಯ ಗೋಡೆಗೆ ಒರಗಿನಿಂತು ನಾಯಿಗಳ ಕಚ್ಚಾಟವನ್ನು ನೋಡುತ್ತಿದ್ದೆ. ಅಷ್ಟರಲ್ಲಿ ನನ್ನ ಆರಾಧ್ಯಪುರುಷ ನನ್ನ ಸಮೀಪ ಬಂದ. ಕಚಗುಳಿಯಿಡುವ ಅವರ ಮೀಸೆಯನ್ನು ಕೂದಲುಗಳು ನನ್ನ ಮುಖದಲ್ಲೆಲ್ಲಾ ಸಂಚರಿಸಿತು. ಎದೆಯ ನೀಳವಾದ ಕೂದಲುಗಳು ಎರಡು ಅಂಗಿಗಳನ್ನು ಭೇದಿಸಿ ನನ್ನ ದೇಹವನ್ನೆಲ್ಲಾ ಉಜ್ಜಿತು.

'ಮಗನೇ, ನನಗೆ ನಿನ್ನ ಮೇಲೆ ಕೊಂಚವೂ ದ್ವೇಷವಿಲ್ಲ. ನೀನು ದೊಡ್ಡವನಾದ ಮೇಲೆ ಖಂಡಿತವಾಗಿಯೂ ನನ್ನ ಮನೆಗೆ ಬರಬೇಕು.'

ಅಪ್ಪನಿಗೆ ಈ ವಿಷಯವನ್ನು ನಾನು ಹೇಳಲೇ ಇಲ್ಲ. ಆದರೆ ಅಮ್ಮನಿಗೆ ಅದನ್ನು ಗುಟ್ಟಾಗಿ ಹೇಳಿದ್ದೆ. ಅಮ್ಮ ಬಿಕ್ಕಿಬಿಕ್ಕಿ ಅತ್ತು, 'ಅಷ್ಟು ಸಾಕು ಅಣ್ಣ, ಅಷ್ಟು ಸಾಕು' ಎಂದಳು. (ಸಶೇಷ)

---

ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

ಅಂಧ ಉದ್ಯೋಗ ಜನಕನ ಸಾಹಸಗಾಥೆ

# ಪ್ರತಿಕ್ರಿಯೆ

## ಬದುಕು ಬದಲಿಸಿದ ಪರಿ ಅನನ್ಯ

ನೇಮಿಚಂದ್ರ ಅವರ ಧಾರಾವಾಹಿ 'ಭಾವೇಶ್ ಭಾಟಿಯ, ಅಂಧ ಉದ್ಯೋಗ ಜನಕನ ಸಾಹಸ ಗಾಥೆ' ನಮ್ಮ ಬುದ್ಧಿ ಮತ್ತು ಮನಸ್ಸನ್ನು ಆವರಿಸಿದೆ. ಅಂಗವೈಕಲ್ಯವನ್ನು ಮೆಟ್ಟಿ ನಿಂತು ಅವರ ಬದುಕನ್ನು ಬದಲಿಸಿಕೊಳ್ಳುವ ಪರಿ ಅನನ್ಯ. ಇಡೀ ಕಥನ ಕಣ್ಣ ಮುಂದೆಯೇ ನಡೆಯುತ್ತಿರುವಂತೆ ಭಾಸವಾಯಿತು.

—ಭಾರತಿ ಸುಧೀಂದ್ರ, ಬೆಂಗಳೂರು

## ಸ್ವಾಭಿಮಾನವನ್ನು ಮೆಚ್ಚಲೇಬೇಕು

ಮನುಷ್ಯ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು. ಅದಕ್ಕೆ ಅವನ ದೈಹಿಕ ನ್ಯೂನತೆಗಳು ಅಡ್ಡ ಬರುವುದಿಲ್ಲ ಎಂಬುದಕ್ಕೆ ಭಾವೇಶ್ ಭಾಟಿಯಾ ಒಳ್ಳೆಯ ಉದಾಹರಣೆ. ತನ್ನಂತೆ ಅಂಧರಾದವರನ್ನು ಕೆಲಸಕ್ಕೆ ತೆಗೆದುಕೊಂಡು ಸ್ವಾಭಿಮಾನದಿಂದ ಜೀವಿಸುವುದಕ್ಕೆ ಸಹಾಯ ಮಾಡಿದ ಭಾವೇಶ್ ಅವರ ಸ್ವಾಭಿಮಾನವನ್ನು ಮೆಚ್ಚಲೇಬೇಕು.

—ಕೆ.ಎಸ್. ಸವಿತ, ಬೆಂಗಳೂರು

## ಅಂಧರಿಗೆ ಆತ್ಮವಿಶ್ವಾಸ

'ಭಾವೇಶ್ ಭಾಟಿಯಾ' ಮನೋಜ್ಞ ಕಥೆ. ಅಂಧರಿಗೆ ಆತ್ಮವಿಶ್ವಾಸವನ್ನು ಮೂಡಿಸಿ ಜೀವನದಲ್ಲಿ ಹೇಗೆ ಮುಂದೆ ಬರಬಹುದು ಎಂದು ತಿಳಿಸಿದ್ದಾರೆ. ತಾವು ಬೆಳೆಯುವುದಲ್ಲದೇ ಉಳಿದವರು ತಮ್ಮ ಅಂಧತ್ವವನ್ನು ಮರೆತು ಮುಂದೆ ಬರುವುದಕ್ಕೆ ಉತ್ಸಾಹ ತುಂಬಿ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. 'ಒಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಸ್ತ್ರೀ ಇರುತ್ತಾಳೆ' ಎನ್ನುವುದನ್ನು ಅವರ ಶ್ರೀಮತಿ ನೀತಾ ಸಾಬೀತುಪಡಿಸಿದ್ದಾರೆ.

—ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

## ಧೈರ್ಯಶಾಲಿ ಭಾವೇಶ್

ಇದು ಕಲ್ಪನೆಯ ಕಥೆಯಲ್ಲ. ವಾಸ್ತವ ಬದುಕಿನ ಜೀವಂತ ವ್ಯಕ್ತಿಯ ನೈಜ ಅನುಭವಗಳ ಕಥನ. ಇಲ್ಲಿ ಆತ್ಮವಿಶ್ವಾಸದ, ಸ್ವಾಭಿಮಾನದ, ಸ್ನೇಹಜೀವಿಯ ಬದುಕು ಉದ್ದಕ್ಕೂ ಬಿಚ್ಚಿಕೊಳ್ಳುತ್ತ ವಾರವಾರವೂ ಕಾಯುವಂತೆ ಆಗಿಬಿಟ್ಟಿತ್ತು. ಇಲ್ಲಿ ಕೊನೆಯವರೆಗೂ ಮನಸ್ಸಿನಲ್ಲಿ ನಿಂತ ಪಾತ್ರಗಳೆಂದರೆ ಭಾವೇಶ್ ಅವರ ತಾಯಿ ಮತ್ತು ಅವರ ಹೆಂಡತಿ ನೀತಾ. ಒಬ್ಬ ಯಶಸ್ವಿ ಉದ್ಯಮಿಯಾಗಿ ಇಂದು ಭಾವೇಶ್ ಇದ್ದಾರೆಂದರೆ ಈ ಇಬ್ಬರು ಹೆಣ್ಣುಗಳಿಂದ. ಮತ್ತು ಸಿಕ್ಕ ಅಪಾರವಾದ ಸ್ನೇಹಹಸ್ತಗಳಿಂದ. ಭಾವೇಶ್ ಅವರ ಜೊತೆ ನಾನು ಮಾತನಾಡಿದಾಗ ಅವರು ಇದನ್ನೇ ಹೇಳಿದರು. ಅವರೆಂದೂ ತಮ್ಮನ್ನು ಅಸಹಾಯಕರನ್ನಾಗಿ ನೋಡಿಕೊಳ್ಳಲಿಲ್ಲ. ಬದುಕಿನ ಪ್ರತಿಯೊಂದು ಕ್ಷಣವನ್ನೂ, ಆತಂಕದ ಕ್ಷಣಗಳನ್ನೂ ಎದುರಿಸಿದ ಧೈರ್ಯಶಾಲಿ ಅವರು.

—ಸುಬ್ಬಲಕ್ಷ್ಮಿ ಹೆಚ್.ಕೆ., ಕೋಲಾರ

## ಎಲ್ಲರಿಗೂ ಮಾದರಿ

ಧಾರಾವಾಹಿ ಮನಸೂರೆಗೊಂಡಿತು. ಅಂಧ ವ್ಯಕ್ತಿ ಸೈಕಲ್ ಏರಿ ನೇಪಾಳಕ್ಕೆ ಹೋಗುವುದು, ಮೋಂಬತ್ತಿ ತಯಾರಿಕೆ ಆರಂಭಿಸಿ ತಳ್ಳುಗಾಡಿಯಲ್ಲಿ ಮಾರಿ ಜೀವನ ನಡೆಸುವುದು, ನಿಜಕ್ಕೂ ಮಾದರಿ. ಅಂತಹ ಅಂಧ ವ್ಯಕ್ತಿಯನ್ನು ಶ್ರೀಮಂತ ಹುಡುಗಿ ಸಂಗಾತಿಯಾಗಿ ಸ್ವೀಕರಿಸಿ ಅವರ ಉದ್ಯಮದ ಬೆಳವಣಿಗೆಗೆ ತನ್ನ ಸರ್ವಸ್ವವನ್ನು ಸಮಪಿ9ಸಿ ಭಾವೇಶ್ ಹೆಗಲಿಗೆ ಹೆಗಲಾಗುವುದು ನಿಜವಾಗಿಯೂ ಹೊಗಳಲು ಪದಗಳಿಲ್ಲ. ಭಾವೇಶ್ ಅವರು ಬರೀ ಅಂಧರಿಗೆ ಮಾತ್ರವಲ್ಲ, ಎಲ್ಲ ಯುವಕ ಯುವತಿಯರಿಗೆ ಮಾದರಿಯಾಗಿದ್ದಾರೆ.

ಕಥೆಗಾರ್ತಿ ನೇಮಿಚಂದ್ರ ಅವರ ಬರವಣಿಗೆ ಅದ್ಭುತ.

—ಎಸ್.ವಿ. ಗೋಪಾಲ್ ರಾವ್, ಬೆಂಗಳೂರು

ಸರ್ಕಾರಿ ಉದ್ಯೋಗದ ನಿರೀಕ್ಷೆಯಲ್ಲಿ ಇರುವ ಯುವ ಜನತೆಗೆ ಭಾವೇಶ್ ಭಾಟಿಯಾ ಅವರ ಬದುಕು ಮಾದರಿಯಾಗಿದೆ.

— ಜನೆಟ್ ವತ್ಸಲ, ಕೋಲಾರ, ಪಿ. ಜಯವಂತ ಪೈ, ಕುಂದಾಪುರ

## ಹೃದಯಂಗಮ

ಧಾರಾವಾಹಿ ತುಂಬಾ ಚೆನ್ನಾಗಿ ಮೂಡಿ ಬಂತು. ಪ್ರತಿ ವಾರವೂ ಕುತೂಹಲದಿಂದ ಕಾಯುತ್ತಿದ್ದೆ. ಅವರು ಎದುರಿಸಿದ ಕಷ್ಟಗಳು ಮತ್ತು ಮಾಡಿದ ಸಾಧನೆಗಳನ್ನು ಲೇಖಕಿ ತುಂಬಾ ಹೃದಯಂಗಮವಾಗಿ ವಿವರಿಸಿದ್ದಾರೆ.

— ಗಣೇಶ್ ರಾವ್ ನಾಡಿಗೇರ್, ಶಿವಮೊಗ್ಗ

## ಸಾಹಸಗಾಥೆ ಗೊತ್ತಿರಲಿಲ್ಲ

ಸನ್‌ರೈಸ್ ಮೋಂಬತ್ತಿ ಮನೆಗೆ ತಂದಿದ್ದೆ. ಅದರ ಹಿಂದೆ ಇಷ್ಟೊಂದು ಸಾಹಸಗಾಥೆ ಇರುವುದು ಗೊತ್ತಿರಲಿಲ್ಲ. ಭಾವೇಶ್ ಭಾಟಿಯಾ ಅವರ ಸ್ಪರ್ಶಜ್ಞಾನ, ಗ್ರಹಣಾಶಕ್ತಿ ಎರಡೂ ಅದ್ಭುತವೇ ಸರಿ. ತಾಯಿಯೇ ಇವರ ಬದುಕನ್ನು ಬದಲಾಯಿಸಿದ ವ್ಯಕ್ತಿ ಎನ್ನಬಹುದು. ನೀತಾ ಅವರಂಥ ಪತ್ನಿ, ಸಚಿನ್, ಭಾವಸರಂತಹ ಸ್ನೇಹಿತರು ಸಿಕ್ಕಿದ್ದು ಇವರ ಅದೃಷ್ಟ. ನೇಮಿಚಂದ್ರರ ಸರಳ ಬರವಣಿಗೆಯಿಂದ ಇದು ಧಾರಾವಾಹಿ ಅನ್ನಿಸದೆ ನಾವೇ ಕಣ್ಣಾರೆ ಕಂಡ ಅನುಭವ ಮೂಡಿತು

— ವಿದ್ಯಾ ಶೆಣೈ ಕುಂದಾಪುರ

## ಸಾಹಸಗಳ ಜೀವನಕಥೆ

ನಮ್ಮ ಸಮಕಾಲೀನ ವ್ಯಕ್ತಿಯ ಸಾಹಸಗಳ ಜೀವನಕಥೆ ಓದಿದಾಗ ನಮ್ಮ ಜೀವನಕ್ಕೆ ತಕ್ಷಣ ಒದಗಿದ ಸಂಜೀವಿನಿಯಂತಿತ್ತು. ಇಂತಹ ವ್ಯಕ್ತಿಯ ಚಿತ್ರಣವನ್ನು ಅತ್ಯುತ್ತಮವಾಗಿ, ಯಾವುದೇ ಘಟನೆಯನ್ನು ವೈಭವೀಕರಿಸದೆ, ಬರೆದ ಲೇಖಕಿ ನೇಮಿಚಂದ್ರರವರು ಅಭಿನಂದನಾರ್ಹರು.

—ಬಿ.ಶೋಭಾ ಅರಸ, ತೆಕ್ಕಟ್ಟೆ

## ಓದಲೇಬೇಕಾದ ಕಾದಂಬರಿ

'ಭಾವೇಶ್ ಭಾಟಿಯಾ' ಅವರ ಸಾಹಸಗಾಥೆ ಆತ್ಮಾನುಕಂಪದಿಂದ ನರಳುತ್ತಿರುವವರೆಲ್ಲಾ ಓದಲೇಬೇಕಾದ ಕೃತಿಯಾಗಿದೆ. ಹಣ ಶಕ್ತಿಯೂ ಇಲ್ಲದ ಒಬ್ಬ ಅಂಧ ವ್ಯಕ್ತಿ, ಕ್ಯಾನ್ಸರ್‌ನಿಂದ ನರಳುತ್ತಿರುವ ತನ್ನ ತಾಯಿಯ ಚಿಕಿತ್ಸೆಗಾಗಿ ಒಬ್ಬಂಟಿಯಾಗಿ ಹೋರಾಡುವುದನ್ನು ಕಲ್ಪಿಸಿಕೊಳ್ಳುವುದು ಕೂಡ ಕಷ್ಟ. ಸುದೀರ್ಘವಾದ ಕೃತಿಯು ಸ್ವಲ್ಪ ಸಂಕ್ಷಿಪ್ತಗೊಳ್ಳಬಹುದಾಗಿತ್ತು.

—ಎಚ್.ಎಸ್. ಶ್ರೀಮತಿ, ಬೆಂಗಳೂರು